ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No: 0821-2343384

CHAMUNDESHWARI ELECTRICITY SUPPLY CORPORATION LIMITED
*(A Government of Karnataka Undertaking)*
Corporate Office,
CESC, Mysore-570017
**Web Site:** www.cescmysore.org.
E-Mail: gmhrd@cescmysore.org.

Company Identity Number[CIN]:- U40109KA2004SGC035177

ಕ್ರಮಾಂಕ:ಸೆಸ್ಕ್/ಆ ಮತ್ತು ಮಾಸಂ/03/11/2022-23/ Cys-332 ದಿನಾಂಕ: 09 JUN 2022
ಲಗತ್ತು:2 ಹಾಳೆಗಳು.

ಮುಖ್ಯ ಇಂಜಿನಿಯರ್(ವಿ),
ಕಾರ್ಯ ಮತ್ತು ಪಾಲನಾ ವಲಯ,
ಮೈಸೂರು/ಹಾಸನ,
ಅಧೀಕ್ಷಕ ಇಂಜಿನಿಯರ್(ವಿ),
ಕಾರ್ಯ ಮತ್ತು ಪಾಲನಾ ವೃತ್ತ,
ಮೈಸೂರು/ಚಾಮರಾಜನಗರ-ಕೊಡಗು,
ಮಂಡ್ಯ/ಹಾಸನ,
ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಕಾರ್ಯ ಮತ್ತು ಪಾಲನಾ ವಿಭಾಗ,
ಚಾವಿಸನಿನಿ.

ಮಾನ್ಯರೆ,

**ವಿಷಯ:** ಹೆಚ್.ಡಿ.ಎಫ್.ಸಿ. ಗೃಹ ಮುಂಗಡ ವಸೂಲಾತಿ ಬಗ್ಗೆ.
**ಉಲ್ಲೇಖ:** ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ, ಇವರ ಪತ್ರಸಂಖ್ಯೆ: ಎನರ್ಜಿ 150 ಸಿಓಆರ್‌ಡಿ 2022 ದಿನಾಂಕ:25.05.2022.

*****

ಉಲ್ಲೇಖಿತ ಪತ್ರದಲ್ಲಿ ಆರ್ಥಿಕ ಇಲಾಖೆಯ ಅರೆ ಸರ್ಕಾರಿ ಸಂಖ್ಯೆ:ಆಇ 06 ಮಕಮು 2022 ದಿನಾಂಕ:29.04.2022ರ ಪತ್ರವನ್ನು ಇದರೊಂದಿಗೆ ಲಗತ್ತಿಸಿ ಗೃಹ ನಿರ್ಮಾಣ ಮುಂಗಡಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಸರ್ಕಾರವು ದಿನಾಂಕ:01.08.1989ರಿಂದ ಅನ್ವಯವಾಗುವಂತೆ ವಿವಿಧ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸರ್ಕಾರಿ ಅಧಿಕಾರಿ/ನೌಕರರುಗಳಿಗೆ ಗೃಹ ಮುಂಗಡವನ್ನು ಇಲಾಖಾ ಮುಖ್ಯಸ್ಥರಿಂದ ಮಂಜೂರು ಮಾಡಿ, ಹೆಚ್.ಡಿ.ಎಫ್.ಸಿ ಸಂಸ್ಥೆ ಬೆಂಗಳೂರುರವರಿಂದ ಬಿಡುಗಡೆ ಮಾಡಲಾಗಿರುತ್ತದೆ. ಈ ಹಿನ್ನಲೆಯಲ್ಲಿ ತಮ್ಮ ಅಧೀನದಲ್ಲಿ ಬರುವ ಎಲ್ಲಾ ಇಲಾಖಾ ಮುಖ್ಯಸ್ಥರಿಗೆ ಹೆಚ್.ಡಿ.ಎಫ್.ಸಿ ಗೃಹ ಮುಂಗಡದ ವಸೂಲಾತಿಗೆ ಸಂಬಂಧಿಸಿದ ಬಾಕಿ ಇರುವ ಪ್ರಕರಣಗಳನ್ನು ಪರಿಶೀಲಿಸಿ ಶೀಘ್ರವಾಗಿ ನಿವೃತ್ತಿ ಮುಂಗಡದಾರರಿಂದ ಬಾಕಿ ಮೊತ್ತವನ್ನು ವಸೂಲಿ ಮಾಡಲು ಸೂಕ್ತ ಕ್ರಮ ಕೈಗೊಳ್ಳಲು ಸೂಚನೆ ನೀಡುವಂತೆ ಕೋರಿರುತ್ತಾರೆ.

ಮುಂದುವರೆದು, ಚಾವಿಸನಿನಿ ವ್ಯಾಪ್ತಿಯ ವಿವಿಧ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರು ದಿನಾಂಕ:01.08.1989ರಿಂದ ಅನ್ವಯವಾಗುವಂತೆ ಹೆಚ್.ಡಿ.ಎಫ್.ಸಿ ಸಂಸ್ಥೆ ಯಿಂದ ಗೃಹ ಮುಂಗಡದ ಸಾಲವನ್ನು ಪಡೆದಿದ್ದಲ್ಲಿ ಸದರಿ ಅಧಿಕಾರಿ/ನೌಕರರ ವೇತನ/ನಿವೃತ್ತಿ ಮುಂಗಡದಲ್ಲಿ ವಸೂಲಿ ಮಾಡಿ **COMMISSIONER OF TREASURIES, BANGALORE** ಇವರ ಹೆಸರಿಗೆ ಡಿ.ಡಿ.ಯನ್ನು ಖರೀದಿಸಿ ಸಲ್ಲಿಸುವಂತೆ ವೇತನ ಬಟವಾಡೆ ಅಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ತಿಳಿಸುತ್ತಾ ಉಲ್ಲೇಖಿತ ಪತ್ರದ ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕೈಗೊಳ್ಳಲು ಸೂಚಿಸಿದೆ.

ತಮ್ಮ ವಿಶ್ವಾಸಿ,

ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ)
ಚಾವಿಸನಿನಿ., ಮೈಸೂರು.

ಪು.ತಿ.ನೋ.

<u>ಪ್ರತಿಗಳು:</u>

- ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ವಿಕಾಸ ಸೌಧ, ಬೆಂಗಳೂರು ಇವರ ಮಾಹಿತಿಗಾಗಿ.
- ಉಪ ಪ್ರಧಾನ ವ್ಯವಸ್ಥಾಪಕರು(ಎಂ.ಐ.ಎಸ್.), ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರುರವರಿಗೆ ನಿಗಮದ ವೆಬ್ ಸೈಟ್‌ನಲ್ಲಿ ಪ್ರಕಟಿಸಲು.
- ಸಹಾಯಕ ಪ್ರಧಾನ ವ್ಯವಸ್ಥಾಪಕರು(ಆಂ.ನಿ), ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರು, ಇವರ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.
- ಹಿಸ-2(ಆ ಮತ್ತು ಮಾ.ಸಂ).

# ಕರ್ನಾಟಕ ಸರ್ಕಾರ

ಸಂಖ್ಯೆ: ಎನರ್ಜಿ 150 ಸಿಓಆರ್‌ಡಿ 2022

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:25.05.2022

**ಇವರಿಂದ:-**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಇಂಧನ ಇಲಾಖೆ,
ಬೆಂಗಳೂರು-1.

**ಇವರಿಗೆ:-**

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ, ಕಲಬುರಗಿ.
5. ವ್ಯವಸ್ಥಾಪಕನಿರ್ದೇಶಕರು, ಮಂಗಳೂರು ವಿದ್ಯುತ್ ಸರಬರಾಜು ಕಂಪನಿ, ಮಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ, ಮೈಸೂರು.
7. ವ್ಯವಸ್ಥಾಪಕನಿರ್ದೇಶಕರು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ, ಹುಬ್ಬಳ್ಳಿ.
8. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು.
9. ವ್ಯವಸ್ಥಾಪಕ ನಿರ್ದೇಶಕರು, ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್, ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಕಾರ್ಖಾನೆ, ಮೈಸೂರು ರಸ್ತೆ, ಬಾಪೂಜಿ ನಗರ, ಬೆಂಗಳೂರು.
11. ವ್ಯವಸ್ಥಾಪಕ ನಿರ್ದೇಶಕರು, ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್, ತುಮಕೂರು ಮೈನ್ ರಸ್ತೆ, ಯಶವಂತಪುರ, ಬೆಂಗಳೂರು.
12. ಮುಖ್ಯ ವಿದ್ಯುತ್ ಪರಿವೀಕ್ಷಕರು ವಿದ್ಯುತ್ ಪರಿವೀಕ್ಷಣಾಲಯ, ಬೆಂಗಳೂರು.
13. ಕಾರ್ಯದರ್ಶಿ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ, ಬೆಂಗಳೂರು.

ಚಾವಿಸನಿನಿ.
ನಿಗಮ ಕಛೇರಿ, ಮೈಸೂರು
ಮು.ಪ್ರ.ವ್ಯ (ಆ ಮತ್ತು ಮಾ ಸಂ)
ಮು.ಪ್ರ.ವ್ಯ (ತರಬೇತಿ)
ಕಂಪನಿ ಕಾರ್ಯದರ್ಶಿ
ಸಾರ್ವಜನಿಕ ಸಂಪರ್ಕಾಧಿಕಾರಿ
ಸ.ಪ್ರ.ವ್ಯ (ಆ ಮತ್ತು ಮಾ.ಸಂ)
ಸ.ಪ್ರ.ವ್ಯ

**ಮಾನ್ಯರೇ,**

ವಿಷಯ: ಹೆಚ್.ಡಿ.ಎಫ್.ಸಿ. ಗೃಹ ಮುಂಗಡ ವಸೂಲಾತಿ ಬಗ್ಗೆ.

ಉಲ್ಲೇಖ: ಆರ್ಥಿಕ ಇಲಾಖೆಯ ಅ.ಸ ಪತ್ರ ಸಂಖ್ಯೆ:ಆಇ 06 ಮಕಮು 2022 ದಿನಾಂಕ:29.04.2022.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಆರ್ಥಿಕ ಇಲಾಖೆಯ ಅರೆ ಸರ್ಕಾರಿ ಪತ್ರ ಸಂಖ್ಯೆ:ಆಇ 06 ಮಕಮು 2022, ದಿನಾಂಕ:29.04.2022 ನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ತಮಗೆ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

N. Mangalagowri 25/5/22
(ಎನ್.ಮಂಗಳಗೌರಿ)
ಸರ್ಕಾರದ ಅಧೀನ ಕಾರ್ಯದರ್ಶಿ,

## ಸರ್ಕಾರದ ಕಾರ್ಯದರ್ಶಿ (ಆಯವ್ಯಯ ಮತ್ತು ಸಂಪನ್ಮೂಲ), ಆರ್ಥಿಕ ಇಲಾಖೆ

## SECRETARY TO GOVT. (BUDGET & RESOURCES), FINANCE DEPARTMENT

ದಿನಾಂಕ: 29.04.2022

ಅ.ಸ. ಪತ್ರ ಸಂಖ್ಯೆ: ಆಇ 06 ಮಕಮು 2022

ಮಾನ್ಯರೆ,

ಗೃಹ ನಿರ್ಮಾಣ ಮುಂಗಡಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಸರ್ಕಾರವು ದಿನಾಂಕ: 01.08.1989ರಿಂದ
ಅನ್ವಯವಾಗುವಂತೆ ವಿವಿಧ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸರ್ಕಾರಿ ಅಧಿಕಾರಿ/ನೌಕರರುಗಳಿಗೆ ಗೃಹ
ಮುಂಗಡವನ್ನು ಇಲಾಖಾ ಮುಖ್ಯಸ್ಥರಿಂದ ಮಂಜೂರು ಮಾಡಿ, ಹೆಚ್.ಡಿ.ಎಫ್.ಸಿ.ಸಂಸ್ಥೆ, ಬೆಂಗಳೂರು ರವರಿಂದ ಬಿಡುಗಡೆ
ಮಾಡಲಾಗಿರುತ್ತದೆ. ಸದರಿ ಗೃಹ ಮುಂಗಡವನ್ನು ಪಡೆದಿರುವ ನೌಕರರ ಖಾತೆಗಳನ್ನು ನಿರ್ವಹಿಸಲು,
ಹೆಚ್.ಡಿ.ಎಫ್.ಸಿ.ಸಂಸ್ಥೆಗೆ ಮಾಹೆಯಾನ ಮೊತ್ತವನ್ನು ಮರುಪಾವತಿಸಲು ಮತ್ತು ಲೆಕ್ಕ ನಿರ್ವಹಣೆ, ತೀರುವಳಿ ಪತ್ರದ
ವಿತರಣೆಗಾಗಿ ಸರ್ಕಾರವು ಖಜಾನೆ ಆಯುಕ್ತರನ್ನು ನಾಮ ನಿರ್ದೇಶನ ಮಾಡಿರುತ್ತದೆ. ಗೃಹ ಮುಂಗಡದ ವಸೂಲಿ
ಜವಾಬ್ದಾರಿಯನ್ನು ಕರ್ನಾಟಕ ಆರ್ಥಿಕ ಸಂಹಿತೆಯ ಕಲಂ 217 ರಲ್ಲಿ ಇಲಾಖಾ ಮುಖ್ಯಸ್ಥರಿಗೆ ಹಾಗೂ ಹಣ ಸೆಳೆಯುವ
ಮತ್ತು ಬಟವಾಡೆ ಅಧಿಕಾರಿಗಳಿಗೆ ವಹಿಸಲಾಗಿರುತ್ತದೆ.

ಆದಾಗ್ಯೂ ಬಹುತೇಕ ಇಲಾಖೆಗಳು ಖಜಾನೆಯಿಂದ ಗೃಹ ಮುಂಗಡ ಸಾಲದ ಬಾಕಿ ವಿವರಗಳನ್ನು ಮತ್ತು
ತೀರುವಳಿ ಪತ್ರವನ್ನು ಪಡೆಯದೇ ನಿವೃತ್ತಿ ಉಪದಾನಗಳನ್ನು ಮಂಜೂರು ಮಾಡುವಂತೆ ಮಹಾಲೇಖಪಾಲರಿಗೆ ಶಿಫಾರಸ್ಸು
ಮಾಡಿರುತ್ತಾರೆ. ಇದರಿಂದಾಗಿ ಖಜಾನೆ ಆಯುಕ್ತಾಲಯದಲ್ಲಿ ನಿರ್ವಹಿಸಲಾಗುತ್ತಿರುವ ಹೆಚ್.ಡಿ.ಎಫ್.ಸಿ. ಗೃಹ
ಮುಂಗಡದಾರರ ಖಾತೆಗಳು ನಿಗಧಿತ ಅವಧಿ ಮುಗಿದ ಬಳಿಕವೂ ಸಾಲವನ್ನು ಮರುಪಾವತಿಸದೇ ಬಾಕಿ ಉಳಿದಿರುತ್ತದೆ. ಈ
ಬಗ್ಗೆ ಮಹಾಲೇಖಪಾಲರು ಪರಿವೀಕ್ಷಣಾ ವರದಿಯನ್ನು ಆಕ್ಷೇಪಣಾ ಕಂಡಿಕೆಯಾಗಿ ನಮೂದಿಸಿರುತ್ತಾರೆ.

ಅಲ್ಲದೆ, ಮುಂಗಡದಾರರು ನಿವೃತ್ತಿಯಾಗಿರುವುದರಿಂದ ವೇತನದಿಂದ ಕಟಾಯಿಸಿ ಪಾವತಿಸುವ ಅವಕಾಶವೇ
ಇಲ್ಲದಿರುವುದರಿಂದ ಸದರಿ ಖಾತೆಗಳನ್ನು ಅನಿರ್ದಿಷ್ಟಾವಧಿಯವರೆಗೆ ಚಾಲ್ತಿಯಲ್ಲಿಡುವ ಸಂದರ್ಭ ಉಂಟಾಗಿದೆ. ಆದ್ದರಿಂದ
ಅಂತಹ ಪ್ರಕರಣಗಳನ್ನು ಮುಕ್ತಾಯ ಮಾಡುವ ನಿಟ್ಟಿನಲ್ಲಿ ಆಯಾ ಇಲಾಖಾ ಮುಖ್ಯಸ್ಥರು ನಿವೃತ್ತಿ ಮುಂಗಡದಾರರಿಂದ
ಬಾಕಿ ಮೊತ್ತವನ್ನು ವಸೂಲಿ ಮಾಡಿ, COMMISSIONER OF TREASURIES, BANGALORE ರವರ ಹೆಸರಿಗೆ ಡಿ.ಡಿ.ಯನ್ನು
ಖರೀದಿಸಿ ಖಜಾನೆ ಆಯುಕ್ತಾಲಯಕ್ಕೆ ಸಲ್ಲಿಸಿ, ತೀರುವಳಿ ಪತ್ರ ಪಡೆಯಲು ಕ್ರಮ ಕೈಗೊಳ್ಳಬೇಕಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, ತಮ್ಮ ಅಧೀನದಲ್ಲಿ ಬರುವ ಎಲ್ಲಾ ಇಲಾಖಾ ಮುಖ್ಯಸ್ಥರಿಗೆ ಅವರ ಇಲಾಖೆಗಳಲ್ಲಿನ
ಹೆಚ್.ಡಿ.ಎಫ್.ಸಿ. ಗೃಹ ಮುಂಗಡದ ವಸೂಲಾತಿಗೆ ಸಂಬಂಧಿಸಿದ ಬಾಕಿ ಇರುವ ಪ್ರಕರಣಗಳನ್ನು ಪರಿಶೀಲಿಸಿ ಶೀಘ್ರವಾಗಿ
ನಿವೃತ್ತಿ ಮುಂಗಡದಾರರಿಂದ ಬಾಕಿ ಮೊತ್ತವನ್ನು ವಸೂಲಿ ಮಾಡಲು ಸೂಕ್ತ ಕ್ರಮ ಕೈಗೊಳ್ಳಲು ಸೂಚನೆ ನೀಡುವಂತೆ
ಕೋರುತ್ತೇನೆ.

ವಂದನೆಗಳೊಂದಿಗೆ,

ತಮ್ಮ ಸ್ನೇಹಬುಗೆಯ,

(ಡಾ॥ ಏಕರೂಪ್ ಕೌರ್)

ಇವರಿಗೆ:

ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.